(6ನೇಪುಟದಿಂದ)

ಮನೆ ಮುಂದಿನ ಕೈತೋಟದಲ್ಲಿ, ಮನೆ ಒಳ-ಹೊರಗೆ, ಕುಂಡಗಳಲ್ಲಿ ಬೆಳೆದ ಡೇರೆ, ಆರ್ಕಿಡ್, ಮಲ್ಲಿಗೆ, ಗುಲಾಬಿ, ದಾಸವಾಳ, ಸೇವಂತಿಗೆ, ಕಣಗಿಲೆ, ಆಂಥೋರಿಯಂ, ಟ್ಯುಲಿಪ್... ಒಂದೇ ಎರಡೇ, ಪಟ್ಟಿ ಮಾಡುತ್ತಾ ಹೋದರೆ ಲೆಕ್ಕಲ್ಲದಷ್ಟಾಗುತ್ತವೆ.

ಆದರೆ ಸಾಮಾನ್ಯವಾಗಿ ಹೊಲ-ಗದ್ದೆ, ತೋಟದ ಬೇಲಿಗಳಲ್ಲಿ, ಹಳ್ಳಿ ಮನೆಗಳ ಅಕ್ಕ-ಪಕ್ಕದಲ್ಲಿ ರಸ್ತೆಬದಿಯಲ್ಲಿಯ ಕಳೆ ಸಸ್ಯಗಳು, ಬಳ್ಳಿಗಳು ತಮ್ಮದೇ ಆದ ವಿಶಿಷ್ಟ ಹೂವುಗಳನ್ನು ಅರಳಿಸುತ್ತವೆ. ಜನರು ಕಳೆ ಸಸ್ಯಗಳೆಂದು ಮೂಗು ಮುರಿಯುತ್ತಾರೆಯೇ ಹೊರತು ಆ ಹೂವುಗಳನ್ನು ಆಸ್ವಾದಿಸುವುದಿಲ್ಲ.

ಹೂವುಗಳೆಂದರೆ ಮಲ್ಲಿಗೆ, ಗುಲಾಬಿ, ದಾಸವಾಳ, ಸೇವಂತಿಗೆ, ಆರ್ಕಿಡ್, ಆಂಥೋರಿಯಂ ಇಷ್ಟೇ ಅಲ್ಲ; ಪ್ರಕೃತಿಯಲ್ಲಿ ಪ್ರತಿಯೊಂದು ಗಿಡ, ಬಳ್ಳಿಗಳಿಗೂ ಅವುಗಳದ್ದೇ ಆದ ಸೌಂದರ್ಯವಿದೆ.

ಯಾವ ಸುಂದರ ಹೂಗಳ ಗಾರ್ಡನ್‌ಗಳಲ್ಲಿಯೂ ನೋಡಲು ಸಿಗದ, ಪ್ರಕೃತಿ ತನ್ನೊಡಲಲ್ಲಿಯೇ ಇರಿಸಿಕೊಂಡು ಪ್ರದರ್ಶಿಸುವ ಈ 'ಸುಂದರಾಂಗಿ'ಯರ ಸ್ಪರ್ಧೆಯ ಅಪರೂಪದ ದೃಶ್ಯ ಇಲ್ಲಿದೆ. ಕೆಲವೇ ಸಮಯ ಕಾಣಿಸಿ ಮಾಯವಾಗುವ ಇಂತಹ ಹಲವಾರು ಸುಂದರಾಂಗಿಯರ ಸೌಂದರ್ಯವನ್ನು ವರ್ಣಿಸುವುದು ಕಷ್ಟ.

ಕೆಲವು ಬೇಲಿ ಹೂಗಳು ದಿನಕ್ಕೊಂದು ಬಣ್ಣ ಬದಲಾಯಿಸುತ್ತಾ, ಸುಮಧುರ ವಾಸನೆ ಬೀರುತ್ತಾ ಆಕರ್ಷಿಸುತ್ತವೆ. ಈ ಬೇಲಿ ಹೂಗಳು ಅರಳುವಾಗ ನಡೆಯುವ ಬಣ್ಣಗಳ ಬದಲಾವಣೆ ನಿಜಕ್ಕೂ ವಿಸ್ಮಯಕಾರಿ. ಬೇಲಿಯ ಹೂಗಳು ಕೇವಲ ಕಣ್ಣಿಗೆ ಮಾತ್ರವಲ್ಲ, ಮನಸ್ಸಿಗೂ ಮುದ ನೀಡುತ್ತವೆ. ಕೆಲವು ಹೂಗಳಿಗೆ ಹೆಸರೇ ಇಲ್ಲ. ಪ್ರಕೃತಿ ಸಹಜ ಈ ಬೇಲಿಯ ಹೂಗಳನ್ನು ನೋಡಿ ಸವಿಯುವ ಸೌಂದರ್ಯ ಪ್ರಜ್ಞೆಯೊಂದಿದ್ದರೆ ಸಾಕು.







